ಅ) ಕಳೆದ ಮೂರು ವರ್ಷಗಳಲ್ ಲಿ 415 ವಿವಿಧ ಶ್ರೇಣಿಯ ಹುದ್ದೆಗಳನ್ನು ಸೃಷ್ಟಿಸಿ, ಅವುಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆಳಂದ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕುರಿತು

366 - ಶ್ರೀ ರೇವುನಾಯಕ ಬೆಳಮಾಗಿ (ಕಮಲಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಳಂದ ತಾಲ್ಲೂಕಿನ ಅನೂರ, ಬೆಳಮಗಿ ಹಾಗೂ ಮರಕೆ ಮುಂತಾದ ಗ್ರಾಮಸ್ಥರಿಂದ ಪರ್ಕ್ಯುಲೇಶನ್ ಟ್ಯಾಂಕ್ ಪ್ರಾರಂಭಿಸಬೇಕೆಂಬ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಗ್ರಾಮಸ್ಥರ ಬೇಡಿಕೆಯನ್ನು ಈಡೇರಿಸಲು ಕ್ರಮಕೈಗೊಳ್ಳಲಾಗುವುದೇ?

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಘಟಪ್ರಭಾ ಯೋಜನೆಯ ಬಲದಂಡೆ ಕಾಲುವೆಯ ಸುರಂಗಮಾರ್ಗ ಕಾರ್ಯಚರಣೆ

235- ಶ್ರೀ ಹೆಚ್.ಎನ್. ನಂಜೇಗೌಡ (ಬಸವಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಯೋಜನೆಯ, ಬಲದಂಡೆ ಕಾಲುವೆಯ ಸುರಂಗ ಮಾರ್ಗವನ್ನು ಕಾರ್ಯಾರ್ಚರಣೆಗೆ ತೆಗೆದುಕೊಳ್ಳಲಾಗಿದೆಯೇ? ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು?

ಆ) ಘಟಪ್ರಭಾ ಯೋಜನೆಯ, ಬಲದಂಡೆ ಸುರಂಗ ಮಾರ್ಗದ ಮೂಲಕ ಹಾಯ್ದು ಹೋಗುವ ಕಾಲುವೆಯಿಂದ ನೀರಾವರಿ ಆಗುವ ಕ್ಷೇತ್ರ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಘಟಪ್ರಭಾ ಬಲದಂಡೆ ಕಾಲುವೆಯಲ್ಲಿ ಒಟ್ಟು ಮೂರು ಸುರಂಗ ಮಾರ್ಗಗಳು ಇವೆ. ಕಡಬಗಟ್ಟಿ ಮತ್ತು ಕಬ್ಬೂರ ಸುರಂಗ ಮಾರ್ಗಗಳನ್ನು ಈಗಾಗಲೇ ಕಾರ್ಯಾಚರಣೆಗೆ ತೆಗೆದುಕೊಳ್ಳಲಾಗಿದೆ. ದಾಸನಾಳ ಸುರಂಗ ಮಾರ್ಗದ ಅಂದಾಜು ಪತ್ರಿಕೆ ಮತ್ತು ಡ್ರಾಫ್ಟ್ ಟೆಂಡರ್ ಷೆಡ್ಯೂಲ್‌ಗಳನ್ನು ಪರಿಶೀಲಿಸಲಾಗುತ್ತಿದೆ.

ಆ)

I)	ಘಟಪ್ರಭಾ ಬಲದಂಡೆ ಕಾಲುವೆ ಯಿಂದ ಆಗುವ ಒಟ್ಟು ಗಳು ನೀರಾವರಿ ಕ್ಷೇತ್ರ	ಹೆಕ್ಟೇರು 1,21,405
1)	ಕಡಬಗಟ್ಟಿ ಸುರಂಗ ಮಾರ್ಗ ದವರೆಗೆ ಆಗುವ ನೀರಾವರಿ ಕ್ಷೇತ್ರ	1,604
2)	ಕಡಬಗಟ್ಟಿ ಮತ್ತು ದಾಸನಾಳ ಸುರಂಗ ಮಾರ್ಗಗಳ ನಡುವಿನ ನೀರಾವರಿ ಆಗುವ ಕ್ಷೇತ್ರ	22,881
3)	ದಾಸನಾಳ ಸುರಂಗ ಮಾರ್ಗದ ನಂತರ ಆಗುವ ನೀರಾವರಿ ಕ್ಷೇತ್ರ	96,920